ಸೀಮೆ ಎಣ್ಣೆ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 55 : (249)
ಮಾನ್ಯ ವಿಧಾನ ಸಭಾ ಸದಸ್ಯರು ಹಸರು : ಶ್ರೀ ಟಿ.ಬಿ.ಜಯಚಂದ್ರ (ಶಿರಾ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಹಾಲಪ್ಪ
(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿವಿಧ ಯೋಜನೆಯಡಿ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ಹಂಚಿಕೆಯಾಗುತ್ತಿರುವ ಪ್ರಮಾಣ ಎಷ್ಟು.

ಉತ್ತರ

ಗ್ರಾಮಾಂತರ ಪ್ರದೇಶದ ಪ್ರತಿ ಅನಿಲ ರಹಿತ ಕಾರ್ಡಿಗೆ ತಲಾ 4 ಲೀಟರ್‌ನಂತೆ. ಪಟ್ಟಣ ಪ್ರದೇಶದ ಪ್ರತಿ ಅನಿಲ ರಹಿತ ಕಾರ್ಡಿಗೆ ತಲಾ 5 ಲೀಟರ್‌ನಂತೆ ಮತ್ತು ಅನೌಪಚಾರಿಕ ಪಡಿತರ ಪ್ರದೇಶದ ಪ್ರತಿ ಅನಿಲ ರಹಿತ ಕಾರ್ಡಿಗೆ ತಲಾ 07 ಲೀಟರ್ ನಂತೆ ಸೀಮೆಎಣ್ಣೆ ಹಂಚಿಕೆ ನೀಡಲಾಗುತ್ತಿದೆ. ಅಡಿಗೆ ಅನಿಲ ಸಂಪರ್ಕ ಹೊಂದಿದ ಕುಟುಂಬದ ಪಡಿತರ ಚೀಟಿಗಳಿಗೆ ಸೀಮೆಎಣ್ಣೆ ಹಂಚಿಕೆ ಇರುವುದಿಲ್ಲ.

ಕ್ರ.ಸಂ. ಪ್ರಶ್ನೆ

ಆ) ವಿಶೇಷವಾಗಿ ಶಿರಾ ತಾಲ್ಲೂಕಿನಲ್ಲಿ ಸೀಮೆಎಣ್ಣೆ ಪಡಿತರದಾರರಿಗೆ ತಲುಪದೇ ವಿತರಕರು (Distributor) ಮೋಸ ಮಾಡುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?

ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಉತ್ತರ

ಹೌದು.

ಸಿರಾ ತಾಲ್ಲೂಕಿನ ಕೆಲವು ನ್ಯಾಯಬೆಲೆ ಅಂಗಡಿಗಳಿಗೆ ಸಗಟು ವಿತರಕರಾದ ಶ್ರೀ ಚಂದ್ರಶೇಖರ್ ಎಂಟರ್ ಪ್ರೈಸ್‌ಸ್ ಇವರು ಪಡಿತರ ಸೀಮೆಎಣ್ಣೆಯನ್ನು ಸಮರ್ಪಕವಾಗಿ ವಿತರಣೆ ಮಾಡದೆ ಇರುವ ಬಗ್ಗೆ ಮತ್ತು ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸದೆ ಇರುವ ಬಗ್ಗೆ ತಹಶೀಲ್ದಾರ್ ಸಿರಾ ತಾಲ್ಲೂಕು ರವರಿಂದ ವರದಿ ಬಂದಿರುತ್ತದೆ.

ಈ ನ್ಯೂನತೆಗಳ ಬಗ್ಗೆ ಸೀಮೆಎಣ್ಣೆ ವಿತರಕರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದು ತುಮಕೂರು ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ವಿಚಾರಣೆಗೆ ಇಡಲಾಗಿದೆ. ವಿಚಾರಣೆ ನಡೆಯುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ. Rural ಮತ್ತು urbun areaದಲ್ಲಿ ಏನೇನು ಕೊಡಬೇಕು ಎನ್ನುವುದನ್ನು ನೀವು ಕೊಟ್ಟಿದ್ದೀರಿ. ಅದರ ಬಗ್ಗೆ ನನ್ನ ಪ್ರಶ್ನೆಯಿಲ್ಲ. ನಾನು ಮುಖ್ಯವಾಗಿ ಕೇಳಿರತಕ್ಕಂಥಾದ್ದು. ಶಿರಾದಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡಬೇಕಾದರೆ ಲೋಪ ಆಗಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ. ಅದನ್ನು ತಾವು ಒಪ್ಪಿಕೊಂಡಿದ್ದೀರಿ. ಅಲ್ಲಿ ಚಂದ್ರಶೇಖರ್ ಎಂಟರ್‌ಪ್ರೈಸಸ್ ಎನ್ನುವವರು ಲೋಪ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಲೋಪವನ್ನು ಕಂಡುಕೊಂಡಿದ್ದು ಯಾವತ್ತು? ತಹಶೀಲ್ದಾರ್ ನೋಟೀಸ್ ಕೊಟ್ಟಿದ್ದು ಯಾವಾಗ ಅದನ್ನು ನೋಡಿದರೆ. ನನಗೆ ಗೊತ್ತಿರುವ ಪ್ರಕಾರ ಇದು ಆಗಿ ಈಗಾಗಲೇ ಸುಮಾರು ಒಂದು ವರ್ಷವಾಯಿತು. ಒಂದು ವರ್ಷದಿಂದಲೂ ಇದು Deputy Commissioner ರವರ courtನಲ್ಲಿದೆ. ಎನ್ನತಕ್ಕಂಥ ಉತ್ತರವನ್ನೇನು ನೀವು ಮೂರನೇ ಪ್ರಶ್ನೆಗೆ ಕೊಟ್ಟಿದ್ದೀರಿ. ಅದು ಸತ್ಯಕ್ಕೆ ದೂರವಾದಂಥಾದ್ದು. ಯಾವ courtನಲ್ಲಿಯೂ pending ಇರತಕ್ಕಂಥ ಪ್ರಶ್ನೆ ಇಲ್ಲ. ಅಧಿಕಾರಿಗಳು ಸತ್ಯಕ್ಕೆ ದೂರವಾಗಿರುವಂಥ ಮಾಹಿತಿಯನ್ನು ಕೊಟ್ಟಿದ್ದಾರೆ. ಇದರಲ್ಲಿ Deputy Commissioner Courtಗೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ಆ dealer ತಪ್ಪು ಮಾಡಿದ್ದಾನೆ ಎಂದರೆ ಅವನಿಗೆ ಶಿಕ್ಷೆ ಕೊಡುವ ಬದಲು dispute ಎಂದು ಹೇಳಿ ಇಟ್ಟುಕೊಂಡು ತಳ್ಳತಕ್ಕಂಥ ಕೆಲಸ ಆಗುತ್ತಿದೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಆ Kerosene dealer ಯಾರಿದ್ದಾರೆ. ಅವನು ಯಾರನ್ನು ಬೇಕಾದರೂ purchase ಮಾಡತಕ್ಕಂಥವನು. ಇವತ್ತು ಇದರಲ್ಲಿ ನಮ್ಮ ಅಧಿಕಾರಿಗಳು ಅವರಲ್ಲಿ ಕೈಜೋಡಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿ. ನೇರವಾಗಿ ಆರೋಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ನಿಮ್ಮಂದ ನಿರೀಕ್ಷೆ ಪಡತಕ್ಕಂಥದ್ದು ಇಷ್ಟೇ. ಯಾವತ್ತೂ ಕೂಡ ಶಿರಾದಲ್ಲಿ 4 ಲೀಟರ್. 5 ಲೀಟರ್ kerosene ಅನ್ನು ಕೊಟ್ಟೇ ಇಲ್ಲ. ಎರಡು ತಿಂಗಳಿಗೆ ಒಂದು ಸಾರಿ quota ಕೊಡತಕ್ಕಂಥದ್ದು ಆಗುತ್ತಿದೆ. ಇದನ್ನು ನಾನು ಶಾಸಕನಾಗಿ ಗಮನಕ್ಕೆ ತಂದರೂ ಕೂಡ ಏನು action ಆಗಿಲ್ಲ. ತಪ್ಪು ಮಾಡಿದಂಥವರನ್ನು immediate ಆಗಿ suspend ಮಾಡುತ್ತೇವೆ ಎನ್ನುವ ಆಶ್ವಾಸನೆ ತಮ್ಮಿಂದ ಬರಬೇಕು. ಮತ್ತು ರಾಜ್ಯದಲ್ಲಿ ಎಲ್ಲ ಕಡೆಯೂ ಸಮರ್ಪಕವಾಗಿ kerosene ಹಂಚಿಕೆಯಾಗತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಆಗಬೇಕು. 4. ಲೀಟರ್. 5 ಲೀಟರ್ ಸೀಮೆ ಎಣ್ಣೆ ಕೊಡುತ್ತಾರೆಂದು ಹಳ್ಳಿ ಜನರಿಗೆ ಗೊತ್ತೆ ಇಲ್ಲ. ಅದನ್ನು ಮುಚ್ಚಿಟ್ಟು ಈ ರೀತಿ ಕಣ್ಣುಮುಚ್ಚಿ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ದಯಮಾಡಿ ಅದಕ್ಕೆ ರಾಜ್ಯಕ್ಕೆ ಒಂದು message ಹೋಗಬೇಕೆನ್ನುವ ದೃಷ್ಟಿಯಿಂದ ತಾವು ಉತ್ತರವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಹಾಲಪ್ಪ : ಯಾವುದೇ ಕಾರಣಕ್ಕೂ ಅದು ದುರುಪಯೋಗ ಆಗದ ಹಾಗೆ ಮಾಡುತ್ತೇವೆ ಮತ್ತು ಯಾರು ಅಧಿಕಾರಿ ಯಾವುದೋ ಒಂದು agency ಯಲ್ಲಿ ತಪ್ಪು ಮಾಡಿದ್ದಾನೆ. ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಆದರೆ. ಅದು delay ಆಗಿದೆ. ಬಹಳ ಸಮಯವಾಗಿದೆ ಎಂದು ಹೇಳುತ್ತಿದ್ದೀರಿ.... ಹಿಂದೆ suspend ಮಾಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಅದು ಆದ ಮೇಲೆ ಪುನಃ ಅವನ ಮೇಲೆ ಒಂದು ಆರೋಪವನ್ನು ಹೊರಿಸಿದ್ದಾರೆ. ಆ ಆರೋಪ ಹೊರಿಸಿ ಒಂದು ವರ್ಷವಾದರೂ ಕೂಡ pending ಇಟ್ಟುಕೊಂಡಿದ್ದಾರೆ.

ಶ್ರೀ ಹೆಚ್.ಹಾಲಪ್ಪ: ಬೇಗನೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ : ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ? 8 ದಿವಸಗಳಲ್ಲಿ. 10 ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದಾದರೂ ಹೇಳಿ. ದಯಮಾಡಿ. ಆ message ಆದರೂ ಹೋಗಲಿ. ಇದೊಂದು ದೊಡ್ಡ ದಂದೆ. ಇವತ್ತು ತುಮಕೂರಿನಲ್ಲಿ kerosene ನಿಂದ diesal ಮಾಡುತ್ತಿದ್ದಾರಲ್ಲಾ. ಆ ದಂಧೆಯಲ್ಲಿರತಕ್ಕಂಥ ಜನ ಇವರು. ಆ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ. ಇದನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಬೇಡಿ. ನೀವು ಹೇಳಿಕೆ ಕೊಟ್ಟ ತಕ್ಷಣ ನಿಮ್ಮ ಹತ್ತಿರವೂ ಬಿಡುವುದಿಲ್ಲವಂತಲ್ಲ. ನಿಮಗೂ ಬಂದು ಲಗ್ಗೆ ಹಾಕತಕ್ಕಂಥ ಕೆಲಸವನ್ನು ಮಾಡುವಂಥ ಪ್ರಭಾವಿ ಜನಗಳು ಇವತ್ತಿನ ದಿವಸ ಇದ್ದಾರೆ. ದಯಮಾಡಿ ಸ್ಪಷ್ಟವಾಗಿ ಹೇಳಿ. 15 ದಿವಸಗಳಲ್ಲಿ ಆದರೂ action ತೆಗೆದುಕೊಳ್ಳುತ್ತೇವೆನ್ನುವ ಮಾತನ್ನಾದರೂ ಹೇಳಿ.

ಶ್ರೀ ಹೆಚ್.ಹಾಲಪ್ಪ : ಇದೇ ಇಲಾಖೆಯ ಮಂತ್ರಿಯೂ ತಾವು ಆಗಿದ್ದೀರಿ. ತಾವು ಕೊಟ್ಟ ಸಲಹೆಯನ್ನು ಖಂಡಿತವಾಗಿಯೂ Implement ಮಾಡುತ್ತೇವೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟೇ ದಿನ ಎಂದು ಹೇಳುವುದು ಕಷ್ಟ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರ ಯಾವುದೇ ಮುಲಾಜಿಗೂ ಒಳಗಾಗುವ ಪ್ರಶ್ನೆಯೇ ಇಲ್ಲ. ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.